# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ/751/2016/ಎ.ಆರ್.ಇ–10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 30/11/2021.

## ವಿಚಾರಣಾ ವರದಿ

**ಉಪಸ್ಥಿತರು:** **ಜಿ. ನಂಜುಂಡಯ್ಯ,**
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆ.ಸ.ನೌ–1 ಶ್ರೀ **ಎಸ್.ಎಂ. ಶ್ರೀರಂಗಯ್ಯ,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ, ಆ.ಸ.ನೌ–2 **ಶ್ರೀ ನಾಗರಾಜು,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ, ಆ.ಸ.ನೌ–3 **ಶ್ರೀ ರವಿಚಂದ್ರ,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು ಆ.ಸ.ನೌ–4 **ಶ್ರೀ ನಾರಾಯಣಮೂರ್ತಿ,** ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ–2980/2014/ಎಆರ್ಎಲ್ಓ–2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 20/10/2016.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 750 ಗ್ರಾಪಂಕಾ 2016, ಬೆಂಗಳೂರು, ದಿನಾಂಕ: 22/11/2016.
3. ಸರ್ಕಾರದ ಆದೇಶ ಸಂಖ್ಯೆ: ED 232 LIB 2016, ಬೆಂಗಳೂರು, ದಿನಾಂಕ: 20/12/2016.
4. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/751/2016, ಬೆಂಗಳೂರು ದಿನಾಂಕ: 23/12/2016.

* * * *

ಈ ದೂರನ್ನು, ದೂರುದಾರರಾದ **ಶ್ರೀ ನಾಗಭೂಷಣ,** ಬಂದ್ರೇಹಳ್ಳಿ, ಮಧುಗಿರಿ ತಾಲ್ಲೂಕು, ತುಮಕೂರು ( ಇನ್ನು ಮುಂದೆ **ದೂರುದಾರರು** ಎಂದು ಕರೆಯಲ್ಪಡುತ್ತಾರೆ ) ರವರು ಆ.ಸ.ನೌ–1 ಶ್ರೀ **ಎಸ್.ಎಂ. ಶ್ರೀರಂಗಯ್ಯ,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ, ಆ.ಸ.ನೌ–2 **ಶ್ರೀ ನಾಗರಾಜು,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ, ಆ.ಸ.ನೌ–3 **ಶ್ರೀ ರವಿಚಂದ್ರ,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು ಆ.ಸ.ನೌ–4 **ಶ್ರೀ ನಾರಾಯಣಮೂರ್ತಿ,** ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರುಗಳ ವಿರುದ್ಧ ಮಧುಗಿರಿ ತಾಲ್ಲೂಕು ಮರುವೇಕೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಬಂದ್ರೇಹಳ್ಳಿ ಗ್ರಾಮದ ಗ್ರಂಥಾಲಯ ಮೇಲ್ವಿಚಾರಕರಾದ ಹನುಮಂತರಾಯಪ್ಪ ತಂದೆ ಮುದಿಗುಬ್ಬಯ್ಯ ಸುಮಾರು 2 ವರ್ಷಗಳಿಂದ ಗ್ರಂಥಾಲಯವನ್ನು ತೆರೆಯದೆ ಸರ್ಕಾರಿ ಸಂಬಳ ಪಡೆಯುತ್ತಿದ್ದಾರೆ. ಅಲ್ಲದೆ ಇವರು ಗ್ರಾಮ ಪಂಚಾಯ್ತಿ ಸದಸ್ಯರಾಗಿರುತ್ತಾರೆ. ಈ ಬಗ್ಗೆ ಕ್ರಮಕೈಗೊಳ್ಳುವಂತೆ ಎದುರುದಾರರನ್ನು ವಿನಂತಿಸಿದರೂ ಸಹ ಯಾವುದೇ ಕ್ರಮಕೈಗೊಂಡಿರುವುದಿಲ್ಲವಾದ್ದರಿಂದ ಆಪಾದಿತರುಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಸರ್ಕಾರದ ಹಣ ದುರುಪಯೋಗವಾಗುವುದುನ್ನು ತಪ್ಪಿಸಬೇಕೆಂದು ದೂರು ಸಲ್ಲಿಸಿರುತ್ತಾರೆ.

2. ಸದರಿ ದೂರನ್ನು ತನಿಖೆಗೆ ಕೈಗೆತ್ತಿಕೊಂಡು, ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 22/11/2016 ಮತ್ತು 20/12/2016 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 23/12/2016 ರಂದು ಅಪರ ನಿಬಂಧಕರು, ವಿಚಾರಣೆಗಳು–10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ–1 ರಿಂದ 4 ರವರುಗಳ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 06.05.2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ–1

1ನೇ ಆ.ಸ.ನೌಕರ ಆದ ಶ್ರೀ **ಎಸ್.ಎಂ.ಶ್ರೀರಂಗಯ್ಯ,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, 2ನೇ ಆ.ಸ.ನೌಕರ **ಶ್ರೀ ಆರ್.ನಾಗರಾಜು,** ಪಿಡಿಓ, ಮರುವೇಕೆರೆ ಗ್ರಾಮ ಪಂಚಾಯ್ತಿ, 3ನೇ ಆ.ಸ.ನೌಕರರಾದ ಶ್ರೀ **ರವಿಚಂದ್ರ,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು 4ನೇ ಆ.ಸ.ನೌಕರರಾದ ಶ್ರೀ **ನಾರಾಯಣ ಮೂರ್ತಿ,** ಉಪನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ಆದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನು ಹೊರಿಸಲಾಗಿದೆ.

**ಆಪಾದನೆ 1)** ಎಂ.ಹನುಮಂತರಾಯಪ್ಪ ಇವರು ಗ್ರಾಮಪಂಚಾಯತಿ ಸದಸ್ಯರಾಗಿ ಅದೇ ಅವಧಿಯಲ್ಲಿ ಗ್ರಂಥಾಲಯ ಮೇಲ್ವಿಚಾರಕನಾಗಿ ಕೆಲಸ ನಿರ್ವಹಿಸಿದ್ದೇನೆಂದು ಹಿಂದಿನ 2 ವರ್ಷಗಳಿಂದ ಗ್ರಂಥಾಲಯ ತೆರೆಯದೆ ಸರ್ಕಾರದ ಗೌರವಧನ ಪಡೆದಿದ್ದರೂ ಸಹ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. 3ನೇ ಎದುರುದಾರರಾದ ನೀವು ಗ್ರಾಮಪಂಚಾಯತಿ ಸದಸ್ಯ ಶ್ರೀ ಹನುಮಂತರಾಯಪ್ಪ ಎಂಬುವವರಿಗೆ ಸುಳ್ಳು ತೃಪ್ತಿಕರ ಸೇವಾ

ಪ್ರಮಾಣಪತ್ರ ನೀಡಿರುತ್ತೀರಿ ಅಥವಾ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದಿಲ್ಲ.

**ಆಪಾದನೆ 2)** 2ನೇ ಆ.ಸ.ನೌಕರರಾದ ನೀವು ಗ್ರಾಮಪಂಚಾಯತಿ ಸದಸ್ಯ ಶ್ರೀ ಹನುಮಂತರಾಯಪ್ಪ ಎಂಬುವವರಿಗೆ ಸುಳ್ಳು ತೃಪ್ತಿಕರ ಸೇವಾ ಪ್ರಮಾಣಪತ್ರ ನೀಡಿರುತ್ತೀರಿ.

**ಆಪಾದನೆ 3)** 3ನೇ ಆಪಾದಿತ ನೌಕರರಾದ ನೀವು ಗ್ರಾಮಪಂಚಾಯತಿ ಸದಸ್ಯ ಮತ್ತು ಗ್ರಂಥಾಲಯ ಮೇಲ್ವಿಚಾರಕ ಆದ ಹನುಮಂತರಾಯಪ್ಪ ಇವರಿಗೆ ಸಂಭಾವನೆಯನ್ನು ಪಾವತಿಸಿ ಹಾಗೂ ಕೆಲವು ಅವಧಿಗೆ ಅಲ್ಪ ಸಂಭಾವನೆ ನೀಡಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ ಮತ್ತು ಎಂ.ಹನುಮಂತರಾಯಪ್ಪ ರವರು ಗ್ರಾಮಪಂಚಾಯತಿ ಸದಸ್ಯರಾಗಿ ಆಯ್ಕೆಯಾದ ವಿಷಯ ತಿಳಿದಿದ್ದರೂ ಸಹ ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಮತ್ತು ಮೇಲಾಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿರುವುದಿಲ್ಲ.

**ಆಪಾದನೆ 4)** 4ನೇ ಆಪಾದಿತರಾದ ನೀವು ಎಂ.ಹನುಮಂತರಾಯಪ್ಪ ರವರು ಗ್ರಾಮಪಂಚಾಯತಿ ಸದಸ್ಯರಾಗಿ ಆಯ್ಕೆಯಾಗಿದ್ದರೂ ಸಹ ಅವರ ಸೇವೆ ತೃಪ್ತಿಕರವಾಗಿದೆ ಎಂದು ಹೇಳಿ ಆತನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯತೆ ಪ್ರದರ್ಶಿಸಿರುತ್ತೀರಿ.

ಆದುದರಿಂದ ಆ.ಸ.ನೌಕರ 1 ರಿಂದ 4 ಆದ ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ

ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)(i) ಮತ್ತು (ii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

ಆದಕಾರಣ 1 ರಿಂದ 4ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1) (i) ಮತ್ತು (ii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ-2*

## ದೋಷಾರೋಪಣೆಯ ವಿವರ

### (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

4. **ದೂರಿನ ಸಂಕ್ಷಿಪ್ತ ವಿವರಣೆ:** ದೂರುದಾರರು ತಮ್ಮ ದೂರಿನಲ್ಲಿ ಮಧುಗಿರಿ ತಾಲ್ಲೂಕು ಮರುವೇಕೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಬಂದ್ರೇಹಳ್ಳಿ ಗ್ರಾಮದ ಗ್ರಂಥಾಲಯ ಮೇಲ್ವಿಚಾರಕರಾದ ಹನುಮಂತರಾಯಪ್ಪ ತಂದೆ ಮುದಿಗುಬ್ಬಯ್ಯ ಸುಮಾರು 2 ವರ್ಷಗಳಿಂದ ಗ್ರಂಥಾಲಯವನ್ನು ತೆರೆಯದೆ ಸರ್ಕಾರಿ ಸಂಬಳ ಪಡೆಯುತ್ತಿದ್ದಾರೆ. ಅಲ್ಲದೆ ಇವರು ಗ್ರಾಮ ಪಂಚಾಯ್ತಿ ಸದಸ್ಯರಾಗಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ 1 ರಿಂದ 4 ನೇ ಆ.ಸ.ನೌಕರರು ಮತ್ತು ಶ್ರೀಮತಿ ಜಯಮ್ಮ, ಅಧ್ಯಕ್ಷರು, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ರವರಿಗೆ ವಿನಂತಿಸಿದರೂ ಸಹ ಅವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಆ.ಸ.ನೌಕರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಸರ್ಕಾರದ ಹಣ ದುರುಪಯೋಗವಾಗುವುದನ್ನು ತಪ್ಪಿಸಬೇಕೆಂದು ದೂರು ಸಲ್ಲಿಸಿದ್ದಾರೆ.

5. ಶ್ರೀ ಎಂ.ಹನುಮಂತರಾಯಪ್ಪ, ಗ್ರಾಮ ಪಂಚಾಯ್ತಿ, ಗ್ರಂಥಾಲಯ ಮೇಲ್ವಿಚಾರಕರು, ಮರುವೇಕೆರೆ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ತಮ್ಮ ಆಕ್ಷೇಪಣೆಯಲ್ಲಿ ತಾನು ಗ್ರಂಥಾಲಯದ ಮಾರ್ಗಸೂಚಿಯಂತೆ ಕೆಲಸ ನಿರ್ವಹಿಸುತ್ತಿದ್ದು 2013 ಜೂನ್ ವರೆಗೆ ಮಾತ್ರ ಸಂಬಳ ಪಡೆದಿದ್ದು

ಅನಂತರದಲ್ಲಿ ತನಗೆ ಗೌರವಧನ ನೀಡಿರುವುದಿಲ್ಲ. ತಾನು ಗ್ರಾಮ ಪಂಚಾಯ್ತಿ ಸದಸ್ಯನಾಗಿ ಆಯ್ಕೆಯಾಗಿದ್ದು ಅಲ್ಲಿಯೂ ಸಹ ತಾನು ಯಾವುದೇ ಗೌರವಧನ ಪಡೆದಿರುವುದಿಲ್ಲ. ತನಗೆ ಗ್ರಂಥಾಲಯ ಇಲಾಖೆಯಿಂದ ನೀಡುವ ಗೌರವ ಧನವನ್ನು ಮಂಜೂರು ಮಾಡುವಂತೆ 4ನೇ ಆಪಾದಿತ ಸರ್ಕಾರಿ ನೌಕರರಿಗೆ ಸಾಕಷ್ಟು ಬಾರಿ ವಿನಂತಿಸಿದರೂ ಅವರು ಗೌರವಧನ ನೀಡಿರುವುದಿಲ್ಲ. ಆದ್ದರಿಂದ ತನ್ನ ವಿರುದ್ಧವಿರುವ ಆಪಾದನೆಗಳನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

6. 1ನೇ ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ ಎಂ.ಹನುಮಂತರಾಯಪ್ಪ, ಗ್ರಾಮ ಪಂಚಾಯ್ತಿ ಗ್ರಂಥಾಲಯ ಮೇಲ್ವಿಚಾರಕರು, ಮರುವೇಕೆರೆ ರವರ ವಿರುದ್ಧ ಬಂದ ದೂರುಗಳ ಹಿನ್ನೆಲೆಯಲ್ಲಿ ದಿ: 20.07.2013 ರಂದು ಪಂಚಾಯ್ತಿ ತುರ್ತು ಸಭೆ ಕರೆದು ಹನುಮಂತರಾಯಪ್ಪ ರವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಗ್ರಂಥಾಲಯ ನಿರ್ದೇಶಕರಿಗೆ ನಿವೇದಿಸಿಕೊಳ್ಳಲಾಗಿರುತ್ತದೆ. ಅಲ್ಲದೆ ಶ್ರೀ ಎಂ.ಹನುಮಂತರಾಯಪ್ಪ ರವರಿಗೆ ಪಂಚಾಯ್ತಿ ಸದಸ್ಯನಾಗಿ ಅಥವಾ ಗ್ರಂಥಾಲಯ ಸಹಾಯಕನಾಗಿ ಎರಡರಲ್ಲಿ ಒಂದು ಹುದ್ದೆಯಲ್ಲಿ ಮುಂದುವರೆಯುವಂತೆ ಎಚ್ಚರಿಕೆ ನೀಡಲಾಗಿದೆ. ಆದ್ದರಿಂದ ತನ್ನ ವಿರುದ್ಧ ಪ್ರಕರಣವನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

7. 2ನೇ ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ ತಾನು ಮರುವೇಕೆರೆ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ದಿ: 2.8.2013 ರಿಂದ 31.3.2014 ರವರೆಗೆ ಕೆಲಸ ಮಾಡಿದದು ಆ ವೇಳೆಯಲ್ಲಿ ಶ್ರೀ ಎಂ.ಹನುಮಂತರಾಯಪ್ಪ ರವರು ಉತ್ತಮವಾಗಿ ಕೆಲಸ ನಿರ್ವಹಿಸಿದ್ದಾರೆಂದು ಪ್ರಮಾಣ ಪತ್ರ ನೀಡಿದ್ದಾರೆಂದು ತಿಳಿಸಲಾಗಿದೆ.

8. 4ನೇ ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ ಶೀ ಎಂ.ಹನುಮಂತರಾಯಪ್ಪ, ಗ್ರಾಮ ಪಂಚಾಯ್ತಿ ಗ್ರಂಥಾಲಯ ಮೇಲ್ವಿಚಾರಕರು ಇವರಿಗೆ ಆಯಾ ತಿಂಗಳಿನ ಗೌರವಧನ ಅವರ ಖಾತೆಗೆ ಜಮಾ ಮಾಡಿದ್ದು, ಆದರೆ ಕರ್ತವ್ಯ ನಿರ್ವಹಣೆಯ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ದಿ: 1.4.2013 ರಿಂದ ಜಿಲ್ಲಾ ಪಂಚಾಯ್ತಿ ಸಾಮಾನ್ಯ ಸಭೆಯು ತೃಪ್ತಿಕರ ಸೇವಾ ಪ್ರಮಾಣ ಪತ್ರವನ್ನು ನೀಡಿದ ನಂತರ ಗೌರವಧನ ಪಾವತಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಮಾಸಿಕೆ ರೂ.25,000/- ಗಳನ್ನು ಮಾತ್ರ

ಪಾವತಿಸಿ ಇನ್ನುಳಿದ ಸಂಭಾವನೆಯನ್ನು ತಡೆಹಿಡಿಯಲಾಗಿದೆ. ಆದ್ದರಿಂದ ಯಾವುದೇ ಹಣ ದುರುಪಯೋಗಿವಾಗಿಲ್ಲವೆಂದು ತಿಳಿಸಿದ್ದಾರೆ.

9. 3ನೇ ಆಪಾದಿತ ನೌಕರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಎಂ.ಹನುಮಂತರಾಯಪ್ಪ, ಗ್ರಾಮ ಪಂಚಾಯ್ತಿ ಗ್ರಂಥಾಲಯ ಮೇಲ್ವಿಚಾರಕರು, ಮರುವೇಕೆರೆ ರವರು ತಮ್ಮ ಗ್ರಾಮದಲ್ಲಿ ದಿನಂಪ್ರತಿ ಗ್ರಂಥಾಲಯ ತೆರೆಯುತ್ತಿದ್ದರು ಅಂತ ತಿಳಿಸಿದ್ದಾರೆ.

10. ದೂರುದಾರರು ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

11. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ;

ಅ) "ಗ್ರಂಥಾಲಯ ಮೇಲ್ವಿಚಾರಕರಾದ ಶ್ರೀ ಎಂ.ಹನುಮಂತರಾಯಪ್ಪ ರವರು ತಾನು ಗ್ರಾಮ ಪಂಚಾಯ್ತಿ ಸದಸ್ಯನಾಗಿ ಆಯ್ಕೆಯಾಗಿದ್ದನ್ನು ಒಪ್ಪಿಕೊಂಡಿದ್ದಾರೆ. ಇದೇ ಅವಧಿಯಲ್ಲಿ ಅವರು ಗ್ರಂಥಾಲಯ ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸಿ ಸರ್ಕಾರದ ಗೌರವಧನ ಪಡೆದಿರುತ್ತಾರೆ. ಇದು ಪಂಚಾಯತ್ ರಾಜ್ ಕಾಯಿದೆ 1993ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ 1 ರಿಂದ 4ನೇ ಆ.ಸ.ನೌಕರರು ಮತ್ತು ಶ್ರೀಮತಿ ಜಯಮ್ಮ, ಅಧ್ಯಕ್ಷರು, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ರವರೆಗೆ ಎಲ್ಲಾ ಮಾಹಿತಿ ಇದ್ದರೂ ಸಹ ಅವರು ಶ್ರೀ ಹನುಮಂತರಾಯಪ್ಪ.ಎಂ. ಗ್ರಂಥಾಲಯ ಮೇಲ್ವಿಚಾರಕರು, ಮರುವೇಕೆರೆ ಗ್ರಾಮ ಪಂಚಾಯ್ತಿ ರವರ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ ಅಥವಾ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದಿಲ್ಲ ಅಥವಾ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದಿಲ್ಲ. ಆದ್ದರಿಂದ 1 ರಿಂದ 4ನೇ ಆಪಾದಿತ ನೌಕರರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯತೆ, ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು 1 ರಿಂದ 4ನೇ ಆಪಾದಿತ ನೌಕರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಸದರಿ 1 ರಿಂದ 4ನೇ

ಆಪಾದಿತ ನೌಕರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 4ನೇ ಆಪಾದಿತ ನೌಕರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

**14.** 1 ರಿಂದ 4ನೇ ಆ.ಸ.ನೌಕರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ರಿಂದ (ii) ರನ್ವಯ ದುರ್ನಡತೆ ಎಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಬೇಕೆಂದು ಕೋರಲಾಗಿ, ಆಪಾದಿತ ನೌಕರರ ವಿರುದ್ಧ 14–ಎ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು 10) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮಗಳ ವಿರುದ್ಧ ಈ ಮೇಲ್ಕಂಡ ಆಪಾದನೆ.**

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ–1 ರಿಂದ 4 ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ–1 ರಿಂದ 4 ರವರುಗಳು ದಿನಾಂಕ

30/05/2017 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ–11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ–1 ರಿಂದ 4 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ–1 ರಿಂದ 4 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ–1 ಮತ್ತು 4 ರವರುಗಳು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

7. ಈ ವಿಚಾರಣೆಯಲ್ಲಿ, ಆ.ಸ.ನೌ–1 ರಿಂದ 4 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ **ಶ್ರೀ ನಾಗಭೂಷಣಾಚಾರ್** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 22** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ–1 ರಿಂದ 3 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 02/11/2017 ರಂದು ಪಡೆದುಕೊಳ್ಳಲಾಗಿರುತ್ತದೆ ಹಾಗೂ **ಆ.ಸ.ನೌ–4** ರವರನ್ನು ಹಾಜರಾಗದಿದ್ದ ಕಾರಣ **ಏಕತರ್ಫಿ** ಎಂದು ಪರಿಗಣಿಸಲಾಗಿರುತ್ತದೆ.

8. ನಂತರ ಆಪಾದಿತ ಸರ್ಕಾರಿ ನೌಕರ ಪರ ವಕೀಲರು ಪಿಡಬ್ಲ್ಯೂ–1 ರವರನ್ನು ಮತ್ತೆ ಕರೆಸಲು ಅರ್ಜಿ ಸಲ್ಲಿಸಿದ್ದು ನಂತರ ಆಪಾದಿತ ಸರ್ಕಾರಿ ನೌಕರ–4 ರವರ ಏಕತರ್ಫಿ ಆದೇಶವನ್ನು ರದ್ದುಪಡಿಸಿಸಲಾಯಿತು, ಪಿಡಬ್ಲ್ಯೂ–1 ರವರು ಹಾಜರಿದ್ದು ಆಪಾದಿತ ಸರ್ಕಾರಿ ನೌಕರ–1 ರಿಂದ 4 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 28/06/2018 ರಂದು ಪಡುಕೊಳ್ಳಲಾಗಿರುತ್ತದೆ.

9. ಆಪಾದಿತ ಸರ್ಕಾರಿ ನೌಕರ–1 ರಿಂದ 4 ಪರ ರಕ್ಷಣಾ ಸಾಕ್ಷಿಯಾಗಿ **ಶ್ರೀ ಹುಮಂತರಾಯಪ್ಪ ಎಂ, ಗ್ರಂಥಾಲಯ ಮೇಲ್ವಿಚಾರಕಾರು, ಮರುವೆಕೆರೆ ಗ್ರಾಮ ಪಂಚಾಯ್ತಿ ರವರನ್ನು ಡಿಡಬ್ಲ್ಯೂ–1** ಎಂದು, **ಆಪಾದಿತ ಸರ್ಕಾರಿ ನೌಕರ–2 ಶ್ರೀ ಆರ್. ನಾಗರಾಜು ರವರನ್ನು ಡಿ.ಡಬ್ಲ್ಯೂ–2** ಎಂದು ನಿ.ಡಿ. 1 ರಿಂದ ನಿ.ಡಿ–5 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. **ಆ.ಸ.ನೌ–3 ಶ್ರೀ ರವಿಚಂದ್ರ ರವರನ್ನು ಡಿಡಬ್ಲ್ಯೂ–3 ಎಂದು** ನಿ.ಡಿ–6 ದಾಖಲಾತಿಯನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ **ಆ.ಸ.ನೌ–1 ಶ್ರೀ ಎಸ್.ಎಂ. ಶ್ರೀರಂಗಯ್ಯ ರವರನ್ನು ಡಿ.ಡಬ್ಲ್ಯೂ–4** ಎಂದು ಮತ್ತು **ಆ.ಸ.ನೌ–4 ಶ್ರೀ ನಾರಾಯಣ ಮೂರ್ತಿ ಎಲ್.ಬಿ, ಗ್ರಂಥಪಾಲಕರು ರವರನ್ನು ಡಿ.ಡಬ್ಲ್ಯೂ–5** ಎಂದು ಸಾಕ್ಷಿ ನುಡಿದಿರುತ್ತಾರೆ.

10. ಉಭಯ ಪಕ್ಷದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಮತ್ತು ಆ.ಸ.ನೌ–1 ರಿಂದ 4 ರವರುಗಳ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ರಿಂದ 4 ರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ **ನಾಗಭೂಷಣಾಚಾರ್** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 22** ರವರೆಗೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

14. ದೂರುದಾರ ಶ್ರೀ **ನಾಗಭೂಷಣಾಚಾರ್** ಬಿ.ಜಿ ಪಿ.ಡಬ್ಲ್ಯೂ–1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆಪಾದಿತ ಸರ್ಕಾರಿ ನೌಕರ–1 ರಿಂದ 4 ರವರುಗಳು 2013–14ನೇ ಸಾಲಿನಿಂದ ಮರವೇಕೆರೆ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಶ್ರೀ ಹನುಮಂತರಾಯಪ್ಪ ರವರು ಗ್ರಾಮಪಂಚಾಯತಿ ಸದಸ್ಯರಾಗಿ ಚುನಾಯಿತರಾಗಿದ್ದರು. ಆದರೆ ಆಪಾದಿತ ಸರ್ಕಾರಿ ನೌಕರರು–1 ರಿಂದ 4 ರವರುಗಳು ಶ್ರೀ ಹನುಮಂತರಾಯಪ್ಪ ರವರು ಗ್ರಂಥಾಲಯ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸಿದ್ದಾಗಿ ಹೇಳಿ ಅವರಿಗೆ ಸಂಬಳವನ್ನು ನೀಡಿ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು, ಆ.ಸ.ನೌ ರವರುಗಳು ಯಾವುದೇ ಕಾನೂನು ಕ್ರಮಕೈಗೊಳ್ಳದೆ ಶ್ರೀ ಹನುಮಂತರಾಯಪ್ಪ ರವರು ಗ್ರಂಥಾಲಯ ಮೇಲ್ವಿಚಾರಕರಾಗಿ ಸಮಾಧಾನಕರವಾಗಿ ಕರ್ತವ್ಯ ನಿರ್ವಹಿಸಿರುತ್ತಾರೆಂದು ಪ್ರಮಾಣ ಪತ್ರ ನೀಡಿರುತ್ತಾರೆಂದು, ಆದ್ದರಿಂದ ತಾನು **ನಿ.ಪಿ–1 ರಿಂದ 3** ರಂತೆ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

15. ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತಾನು ನಿ.ಪಿ–1 ರಿಂದ 3 ದೂರಿನೊಂದಿಗೆ ದಿನಾಂಕ 20/07/2013 ರ ಪಂಚಾಯತಿ ಸಾಮಾನ್ಯ ಸಭೆಯ ನಡವಳಿಕೆಯ ಪ್ರತಿ ನಿ.ಪಿ–4, ಮಧುಗಿರಿ ವಿಧಾನ ಸಭಾ ಕ್ಷೇತ್ರದ ಶಾಸಕರ ಪತ್ರದ ಪ್ರತಿ ನಿ.ಪಿ–5, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯ್ತಿ ಮರುವೇಕೆರೆ ರವರ ದಿನಾಂಕ 22/06/2013 ರ ಪತ್ರದ ಪ್ರತಿ ನಿ.ಪಿ–6,

ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಧುಗಿರಿ ರವರು ದಿನಾಂಕ 01.04.2014 ರಂದು ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರಿಗೆ ಬರೆದ ಪತ್ರದ ಪ್ರತಿ ನಿ.ಪಿ–7, ಸಾರ್ವಜನಿಕರ ಮನವಿ ಪತ್ರದ ಪ್ರತಿ ನಿ.ಪಿ–8, ದಿನಾಂಕ 27.03.2014 ಗ್ರಾಮಮಹಜರ್ ಪ್ರತಿ ನಿ.ಪಿ–9, ಸಾರ್ವಜನಿಕರ ಮತ್ತೊಂದು ಮನವಿ ಪತ್ರದ ಪ್ರತಿ ದಿನಾಂಕ 18/02/2014 ನಿ.ಪಿ–10, ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರ ವರದಿಯ ಪ್ರತಿ ನಿ.ಪಿ–11, ತೃಪ್ತಿಕರ ಸೇವೆಯ ಪ್ರಮಾಣ ಪತ್ರದ ಪ್ರತಿ ನಿ.ಪಿ–12 ರಿಂದ ನಿ.ಪಿ–19, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯಿತಿ ದಿನಾಂಕ 27/06/2014 ರ ದೃಢೀಕರಣ ಪತ್ರ ನಿ.ಪಿ–20, ಉಪ ನಿರ್ದೇಶಕರು(ಪ್ರಭಾರ), ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರು ಪಿಡಿಓ ರವರಿಗೆ ದಿನಾಮಕ 17/06/2014 ರಂದು ಬರೆದ ಪತ್ರದ ಪ್ರತಿ ನಿ.ಪಿ–21 ಮತ್ತು ಪತ್ರಿಕೆ ಕಟಿಂಗ್ ಪ್ರತಿ ನಿ.ಪಿ–22 ಎಂದು ಗುರುತಿಸಿಕೊಂಡಿದ್ದು, ದೂರಿನೊಂದಿಗೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

16. ಪಿಡಬ್ಲ್ಯೂ–1 ರವರು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಶ್ರೀ ಹನುಮಂತರಾಯಪ್ಪ ರವರು ಗ್ರಂಥಾಲಯ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸದಿದ್ದರೂ ಅವರಿಗೆ ಸಂಬಳವನ್ನು ನೀಡಿ ಸಮಾಧಾನಕರವಾಗಿ ಕರ್ತವ್ಯ ನಿರ್ವಹಿಸಿರುತ್ತಾರೆಂದು ದೃಢೀಕರಣ ಪತ್ರವನ್ನು ನೀಡಿ ಆ.ಸ.ನೌ–1 ರಿಂದ 4 ರವರುಗಳು ಯಾವುದೇ ಕಾನೂನು ಕ್ರಮಕೈಗೊಳ್ಳದೆ ಸರ್ಕಾರಿ ಹಣವನ್ನು ದುರುಪಯೋಗಪಡಿಸಿರುತ್ತಾರೆ ಮತ್ತು ಕರ್ತವ್ಯಲೋಪವನ್ನು ಎಸಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

17. ಆಪಾದಿತ ಸರ್ಕಾರಿ ನೌಕರ–1 ರಿಂದ 4 ರವರ ಪರವಾಗಿ **ಶ್ರೀ ಹನುಮಂತರಾಯಪ್ಪ ಎಂ.** ರವರು **ಡಿ.ಡಬ್ಲ್ಯೂ–1 ಎಂದು** ಸಾಕ್ಷ್ಯ ನುಡಿದಿದ್ದು, ತಾನು ಮರುವೆಕೆರೆ ಗ್ರಾಮ ಪಂಚಾಯ್ತಿ ಗ್ರಂಥಾಲಯದಲ್ಲಿ 11 ವರ್ಷದಿಂದ ಗ್ರಂಥಾಲಯ ಮೇಲ್ವಿಚಾರಕನಾಗಿ ಕೆಲಸ ನಿರ್ವಹಿಸಿಕೊಂಡು

ಬಂದಿರುವುದಾಗಿ 2011–12 ನೇ ಸಾಲಿನಲ್ಲಿ ಗ್ರಾಮ ಪಂಚಾಯ್ತಿ ಸದಸ್ಯನಾಗಿ ಚುನಾಯಿತನಾಗಿದ್ದೆನೆಂದು, ತಾನು ದೂರುದಾರರ ಪತ್ನಿಗೂ ಮತ್ತು ಶ್ರೀಮತಿ ಜಯಮ್ಮ ರವರಿಗೆ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ಇದ್ದು ತಾನು ಶ್ರೀಮತಿ ಜಯಮ್ಮರವರಿಗೆ ಸಹಾಯ ಮಾಡಿರುತ್ತೇನೆಂದು ತನ್ನ ವಿರುದ್ಧ ಸುಳ್ಳು ದೂರು ನೀಡಿದ್ದಾಗಿ ತಾನು ಹೊಸದಾಗಿ ಕಟ್ಟಡ ಕಟ್ಟುತ್ತಿದ್ದ ಕಾರಣ ಗ್ರಂಥಾಲಯಪಕ್ಕದ ಕಟ್ಟಡದ ಕೊಠಡಿಗೆ ವರ್ಗಾಯಿಸಿದ್ದಾಗಿ ತಾನು ಕರ್ತವ್ಯ ನಿರ್ವಹಿಸಿದ್ದಾಗಿ ಹೇಳಿದ್ದು, ಸದರಿಯವರ ಹೇಳಿಕೆಯನ್ನು ಒಪ್ಪಲು ಬರುವುದಿಲ್ಲ.

**ಆಪಾದಿತ ಸರ್ಕಾರಿ ನೌಕರ–2 ಶ್ರೀ ಆರ್.ನಾಗರಾಜು** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–2** ಎಂದು ನಿ.ಡಿ.–1 ರಿಂದ 5 ರವರೆಗೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿಯವರು ಮರುವೆಕೆರೆ ಗ್ರಾಮ ಪಂಚಾಯ್ತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಅಕ್ಟೋಬರ್ 9, 2013 ರಿಂದ 31–03–2014 ರ ತನಕ ಕರ್ತವ್ಯ ನಿರ್ವಹಿಸದಾಗಿ ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲವೆಂದು ನುಡಿದಿರುತ್ತಾರೆ.

ಆಸನೌ–2 ರವರು ಮಂಡನಾಧಿಕಾರಿಯವರ ಪಾಟೀ ಸವಾಲಿನಲ್ಲಿ ಈ ಕೆಳಕಂಡಂತೆ ಒಪ್ಪಿಕೊಂಡಿರುತ್ತಾರೆ.

**"ದೋಷಾರೋಪಣ ಪಟ್ಟಿ ಜಾರಿಯಾದ ನಂತರ ನನ್ನ ಪತ್ರ ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ".**

**ಆಪಾದಿತ ಸರ್ಕಾರಿ ನೌಕರ–3 ಶ್ರೀ ರವಿಚಂದ್ರ ರವರು ತಮ್ಮ ಪರವಾಗಿ ತಾವೆ ಡಿ.ಡಬ್ಲ್ಯೂ–4** ಎಂದು ತಾನು ಏಪ್ರಿಲ್ 2014 ರಿಂದ ಇಲ್ಲಿಯವರೆಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಮರುವೆಕೆರೆ ಗ್ರಾಮ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ನಿ.ಪಿ–20 ರಂತೆ ದಿನಾಂಕ 27/06/2014 ರಂದು ದೃಢೀಕರಣ ಪತ್ರ ನೀಡಿರುವುದಾಗಿ ತಾನು ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲವೆಂದು ಹೇಳಿರುತ್ತಾರೆ ಹಾಗೂ ನಿ.ಪಿ–6 ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

ಆಸನೌ–3 ರವರು ಮಂಡನಾಧಿಕಾರಿಯವರ ಪಾಟೀ ಸವಾಲಿನಲ್ಲಿ ಈ ಕೆಳಕಂಡಂತೆ ಒಪ್ಪಿಕೊಂಡಿರುತ್ತಾರೆ.

> **" ಪ್ರಭಾರ ಉಪ ನಿರ್ದೇಶಕರು ನಿಡಿ–6 ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಬರೆದ ಪತ್ರವಾಗಿರುತ್ತದೆ ಎಂದರೆ ಸರಿ".**

**ಆಪಾದಿತ ಸರ್ಕಾರಿ ನೌಕರ–1 ಶ್ರೀ ಶ್ರೀರಂಗಯ್ಯ** ರವರು ತಮ್ಮ ಪರವಾಗಿ ತಾವೇ ಡಿಡಬ್ಲ್ಯೂ–3 ಎಂದು ತಾನು ಮರುವೆಕೆರೆ ಗ್ರಾಮ ಪಂಚಾಯ್ತಿಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ 16/11/2012 ರಿಮದ 09/10/2013 ರವರೆಗೆ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದು, ನಿ.ಪಿ–12 ರಿಂದ 14 ರ ಪ್ರಕಾರ ತೃಪ್ತಿಕರ ಸೇವೆ ಪ್ರಮಾಣ ಪತ್ರ ನೀಡಿರುವುದಾಗಿ ನುಡಿದಿರುತ್ತಾರೆ ಹಾಗೂ ತಾವು ಕರ್ತವ್ಯಲೋಪವೆಸಗಿರುವುದಿಲ್ಲವೆಂದು ನುಡಿದಿರುತ್ತಾರೆ.

ಆಸನೌ–1 ರವರು ಮಂಡನಾಧಿಕಾರಿಯವರ ಪಾಟೀ ಸವಾಲಿನಲ್ಲಿ ಈ ಕೆಳಕಂಡಂತೆ ಒಪ್ಪಿಕೊಂಡಿರುತ್ತಾರೆ.

> **" ನನ್ನ ಆಕ್ಷೇಪಣೆಯಲ್ಲಿ ಸೇವಾ ದೃಢೀಕರಣ ಪತ್ರ ಕೊಟ್ಟಬಗ್ಗೆ ಹೇಳಿರುತ್ತೇನೆ. ಅವರ ಕೆಲಸ ತೃಪ್ತಿಕರವಾಗಿರುತ್ತದೆ ಎಂದು ತಿಳಿಸಿರುತ್ತೇನೆ. ರಾಜಕೀಯ ಒತ್ತಡಕ್ಕೆ ಒಳಗಾಗಿ ಗ್ರಂಥಾಲಯದ ಬಾಗಿಲು ತೆರೆದಿಲ್ಲ ಎಂದು ಪತ್ರ ಕೊಟ್ಟಿದ್ದಾರೆ ಎಂದು ಆಕ್ಷೇಪಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ಪತ್ರದನ್ವಯ ತುರ್ತು ಸಭೆಯನ್ನು ದಿನಾಂಕ 20/07/2013 ರಂದು ಕೆಲಸ ಸರಿಯಾಗಿ ನಿರ್ವಹಿಸದ ಕಾರಣ ಸೂಕ್ತ ಕ್ರಮಕೈಗೊಳ್ಳುವಂತೆ ಶಿಫಾರಸ್ಸು ಮಾಡಿರುತ್ತೇನೆ. ಗ್ರಂಥಾಲಯದ ಬಾಗಿಲನ್ನು ತೆರೆಯದೆ ಒಂದು ವರ್ಷ 2 ಗೌರವ ಧನ**

> ಪಡೆದುಕೊಂಡಿರುವ ಬಗ್ಗೆ ಎಚ್ಚರಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ವಿಷಯವನ್ನು ನನ್ನ ಆಕ್ಷೇಪಣೆಯಲ್ಲಿ ಹೇಳಿರುತ್ತೇನೆ ಅಂದರೆ ಸಭೆಯಲ್ಲಿ ಎಚ್ಚರಿಕೆ ನೀಡಿರುತ್ತೇನೆ. ನನಗೆ ಹನುಮಂತರಾಯಪ್ಪನವರ ವಿರುದ್ಧ ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳುವ ಅಧಿಕಾರ ಇಲ್ಲ. ಆದರೆ ಶಿಫಾರಸ್ಸು ಮಾಡುವ ಅಧಿಕಾರವಿರುತ್ತದೆ".

**ಆಪಾದಿತ ಸರ್ಕಾರಿ ನೌಕರ–4 ಶ್ರೀ ನಾರಾಯಣಮೂರ್ತಿ** ರವರು ತಮ್ಮ ಪರವಾಗಿ ತಾವೆ ಡಿ.ಡಬ್ಲ್ಯೂ–5 ಎಂದು ದಿನಾಂಕ 25.07.2011 ರಿಂದ 12.07.2017 ರವರೆಗೆ ಪ್ರಭಾರ ಉಪ ನಿರ್ದೇಶಕರಾಗಿ ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ಇಲ್ಲಿ ಕರ್ತವ್ಯ ನಿರ್ವಹಿಸಿದ್ದು, ನಿ.ಡಿ–1 ರಂತೆ ತಾನು ಗ್ರಂಥ ಮೇಲ್ವಿಚಾರಕರಿಗೆ ಗೌರವಧನವನ್ನು ಮಂಜೂರು ಮಾಡಿರುವುದಾಗಿ ತಾನು ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲ.

ಆಸನೌ–4 ರವರು ಮಂಡನಾಧಿಕಾರಿಯವರ ಪಾಟೀ ಸವಾಲಿನಲ್ಲಿ ಈ ಕೆಳಕಂಡಂತೆ ಒಪ್ಪಿಕೊಂಡಿರುತ್ತಾರೆ.

> **" ಮಾನ್ಯ ಶಾಸಕರು ಕೆ.ಎನ್ ರಾಜಣ್ಣ, ಮಧುಗಿರಿ ವಿಧಾನಸಭಾ ಇವರು ನನಗೆ ಪತ್ರ ಬರೆದಿದ್ದು, ಅದರಲ್ಲಿ ಸುಮಾರು 1 ವರ್ಷದಿಂದ ಗ್ರಂಥಾಲಯದ ಬಾಗಿಲು ತೆರೆಯದೇ ಇದ್ದರೂ ಗ್ರಾಮಪಂಚಾಯತಿಯವರ ಗಮನಕ್ಕೆ ಬಾರದೇ ಗೌರವಧನ ಪಡೆಯುತ್ತಿದ್ದರು ಎಂದು ಪರಿಶೀಲಿಸಲು ತಿಳಸಿದ್ದರೂ ಎಂದರೆ ಸರಿ. ಅದು ನಿ.ಪಿ–5 ಎಂದು ಗುರುತಿಸಲಾಗಿತ್ತು. ದಿನಾಂಕ 22.06.2013 ರಂದು ನಿ.ಪಿ–6 ರಂತೆ ಮಾಹಿತಿ ನೀಡಿದ್ದರು ಎಂದರೆ ಸರಿ. ಕಾರ್ಯನಿರ್ವಾಹಕ ಅಧಿಕಾರಿ**

ಮಧುಗಿರಿಯವರು ನಿ.ಪಿ–7 ರಂತೆ ಪತ್ರ ಬರೆದು ಡಿಡಬ್ಲ್ಯೂ–1 ಗ್ರಂಥಾಲಯ ಬಾಗಿಲು ತೆರೆಯದೇ 2 ವರ್ಷದಿಂದ ಕಾರ್ಯನಿರ್ವಹಿಸದೆ ಇದ್ದ ಬಗ್ಗೆ ತನಿಖೆಯಲ್ಲಿ ಕ್ರಮವಹಿಸುವಂತೆ ನನಗೆ ತಿಳಿಸಿದ್ದರು ಎಂದರೆ ಸರಿ. ಅದನ್ನು ನಿ.ಪಿ–7 ಎಂದು ಗುರುತಿಸಲಾಗಿರುತ್ತದೆ. ನಿ.ಪಿ–8 ರಂತೆ ಸಾರ್ವಜನಿಕರು ಪತ್ರ ಬರೆದಿದ್ದರು ಎಂದರೆ ಸರಿ. ನಿ.ಪಿ–9 ರಂತೆ ಗ್ರಾಮಸ್ಥರ ಸಮಕ್ಷಮ ಮಧುಗಿರಿ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಮಹಜರ್ ಮಾಡಿರುತ್ತಾರೆ ಎಮದರೆ ಸರಿ. ನಿ.ಪಿ–11 ರಂತೆ ನಾನು ಸ್ವತ: ಗ್ರಾಂಥಾಲಯಕ್ಕೆ ಭೇಟಿ ನೀಡಿದಾಗ ಗ್ರಂಥಾಲಯದ ಬಾಗಿಲುಮುಚ್ಚಿತ್ತು ಎಂದು ವರದಿ ಮಾಡಿರುತ್ತೇನೆ ಎಂದರೆ ಸರಿ. ನಿ.ಪಿ–12 ರಿಂದ 20 ರವರೆಗೆ ಡಿಡಬ್ಲ್ಯೂ–1 ರವರ ಕಾರ್ಯ ತೃಪ್ತಿಕರವಾಗಿದೆ ಎಂದು ಡಿಜಿಓ–1 ರಿಂದ 3 ರವರು ತೃಪ್ತಿಕರ ಸೇವಾ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿ. ನಾನು ಸ್ವತ: ಸ್ಥಳ ಪರಿಶೀಲನೆ ಮಾಡಿ ಬಂದ ನಂತರ ಡಿಡಬ್ಲ್ಯೂ–1 ರವರ ಕೆಲಸ ತೃಪ್ತಿಕರವಾಗಿ ಎಂದು ಡಿಜಿಓ–1 ರಿಂದ 3 ರವರು ಸೇವಾ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿ. ಪಿಡಿಓ ರವರು ನಿಪಿ–21 ರಂತೆ ನನಗೆ ಡಿಡಬ್ಲ್ಯೂ–1 ರವರ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿ. ಗ್ರಂಥಾಲಯ ಮುಚ್ಚಿದ್ದು ಗ್ರಂಥಾಲಯದ ಮೇಲ್ವಿಚಾರಕರು ಕರ್ತವ್ಯ ನಿರ್ವಹಿಸದೇ ಇದ್ದರೂ ಅವರಿಗೆ ಗೌರವಧನ ನೀಡುವುದು ನನ್ನ ಕರ್ತವ್ಯ ಲೋಪ ಆಗಿರುತ್ತದೆ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಸಿಇಓ ರವರ ಗಮನಕ್ಕೆ ತಂದಿರುತ್ತೇನೆ. ಡಿಡಬ್ಲ್ಯೂ–1 ರವರು ಗ್ರಂಥಾಲಯದ

**ಮೇಲ್ವಿಚಾರಣೆ ಮಾಡದಿದ್ದರೂ ಸಹ ಆ ಬಗ್ಗೆ ದೂರು ಇದ್ದರೂ ಸಹ ನನಗೆ ಗಮನಕ್ಕೆ ಇದ್ದರೂ ಸಹ ಅವರ ಸೇವೆ ತೃಪ್ತಿಕರವಾಗಿದೆ ಎಂದು ಡಿಜಿಒ–1 ರಿಂದ 3 ರವರ ಪ್ರಮಾಣ ಪತ್ರದ ಆಧಾರದ ಮೇಲೆ ಅವರ ಹಣ ಸಂದಾಯ ಮಾಡಿರುವುದು ನನ್ನ ಕರ್ತವ್ಯಲೋಪವಾಗಿರುತ್ತದೆ ಎಂದರೆ ಸರಿಯಲ್ಲ".**

23. ಪಿ.ಡಬ್ಲ್ಯೂ–1. ಡಿ.ಡಬ್ಲ್ಯೂ–1 ರಿಂದ 5 ರವರ ಸಾಕ್ಷ್ಯ ನಿ.ಪಿ–1 ರಿಂದ 22 ಹಾಗೂ ನಿ.ಡಿ–1 ರಿಂದ 6 ಹಾಗೂ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಮತ್ತು 2 ರವರ ಹೇಳಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುತ್ತೇನೆ. ಆಪಾದಿತ ಸರ್ಕಾರಿ ನೌಕರ–1 ಶ್ರೀರಂಗಯ್ಯ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮರುವೇಕರೆ ಗ್ರಾಮ ಪಂಚಾಯತಿ ಯಲ್ಲಿ ದಿನಾಂಕ 16/11/2012 ರಿಂದ 09/10/2013 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆ. ಆ.ಸ.ನೌ–2 ಶ್ರೀ ಆರ್. ನಾಗರಾಜು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮರುವೇಕೆರೆ ಗ್ರಾಮಪಂಚಾಯತಿಯಲ್ಲಿ ದಿನಾಂಕ ಆಕ್ಟೋಬರ್ 2013 ರಿಂದ 31.03.2014 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆ. ಆಪಾದಿತ ಸರ್ಕಾರಿ ನೌಕರ ಶ್ರೀ ರವಿಚಂದ್ರ, ಗ್ರಾಮ ಪಂಚಾಯತ್ ಅಧಿಕಾರಿ ರವರು ಏಪ್ರಿಲ್ 2014 ರಿಂದ ಕರ್ತವ್ಯ ನಿರ್ವಹಿಸಿರುವುದು ಕಂಡುಬರುತ್ತದೆ.

ಸದರಿ ವಿಚಾರಣೆಗೆ ಸಂಬಂಧಿಸಿದಂತೆ, ನಿ.ಪಿ–1 ರಿಂದ 3 ರ ಪ್ರಕಾರ ದೂರುದಾರ ಶ್ರೀ ನಾಗಭೂಷಣ ರವರು ಮಧುಗಿರಿ ತಾಲ್ಲೂಕು, ಕಸಬಾ ಹೋಬಳಿ ರವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿ ಮಧುಗಿರಿ ತಾಲ್ಲೂಕು, ಮರುವೇಕೆರೆ ಗ್ರಾಮ ಪಂಚಾಯ್ತಿ ಗ್ರಂಥಾಲಯದ ಮೇಲ್ವಿಚಾರಕಾರಾಗಿರುವ ಶ್ರೀ ಹನುಮಂತರಾಯಪ್ಪ ಎಂಬುವರು ಸುಮಾರು 2 ವರ್ಷಗಳಿಂದ ಗ್ರಂಥಾಲಯದ ಬಾಗಿಲನ್ನು ತೆಗೆದಿರುವುದಿಲ್ಲ, ಇವರು ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆಂದು ಆಪಾದಿಸಿರುತ್ತಾರೆ. **ನಿ.ಪಿ–4** ದಿನಾಂಕ 20/07/2013 ರ ಮರುವೇಕರೆ ಗ್ರಾಮ ಪಂಚಾಯ್ತಿ ಸಾಮಾನ್ಯ ಸಭೆಯ ನಡವಳಿಕೆಯನ್ನು ಪರಿಶೀಲಿಸಲಾಗಿ, ದಿನಾಂಕ 18/07/2013 ರಂದು ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರು ಮರುವೇಕೆರೆ ಗ್ರಾಮಪಂಚಾಯ್ತಿ ಗ್ರಂಥಾಲಯಕ್ಕೆ ಭೇಟಿ ನೀಡಿದಾಗ ಗ್ರಂಥಾಲಯದ ಬಾಗಿಲು ಮುಚ್ಚಿರುತ್ತದೆ ಮತ್ತು ಯಾವುದೇ ಪತ್ರಿಕೆ ಪುಸ್ತಗಳು ಲಭ್ಯವಿರುವುದಿಲ್ಲ ಎಂದು ಧೃಢೀಕರಿಸಿರುತ್ತಾರೆ ಈ ಬಗ್ಗೆ ಪರಿಶೀಲಿಸಲಾಗಿ

ಗ್ರಂಥಾಲಯದ ಬಾಗಿಲು ತೆಗೆದಿರುವುದಿಲ್ಲವೆಂದು ಸ್ಪಷ್ಟವಾಗಿರುತ್ತದೆ. **ನಿ.ಪಿ-5 ನ್ನು** ಪರಿಶೀಲಿಸಲಾಗಿ ಶಾಸಕರು, ಮಧುಗಿರಿ ವಿಧಾನ ಸಭಾ ಕ್ಷೇತ್ರ ರವರು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಉಪ ನಿರ್ದೇಶಕರಿಗೆ ಪತ್ರ ಬರೆದು ಶ್ರೀ ಹನುಮಂತರಾಯಪ್ಪ, ಗ್ರಂಥಾಲಯ ಮೇಲ್ವಿಚಾರಕರು, ಬಂದ್ರೆಹಳ್ಳಿ ರವರು ಸುಮಾರು 1 ವರ್ಷದಿಂದ ಗ್ರಂಥಾಲಯ ಬಾಗಿಲು ತೆರೆಯದೆ ದಿನ ಪತ್ರಿಕೆಗಳನ್ನು ತರಿಸದೆ ಇವರು ಹಾಲಿ ಪಂಚಾಯಿತಿ ಸದಸ್ಯರಾಗಿದ್ದು ವಿನಾಕಾರಣ ವೇತನ (ಗೌರವಧನ) ಪಡೆಯುತ್ತಿದ್ದಾರೆಂದು ಈ ಬಗ್ಗೆ ಪರಿಶೀಲಿಸಲು ಸೂಚಿಸಿರುವುದು ಕಂಡು ಬರುತ್ತದೆ. **ನಿ.ಪಿ-6** ಪ್ರಕಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯ್ತಿ, ಮರುವೇಕೆರೆ ರವರು ಸುಮಾರು ಒಂದು ವರ್ಷದಿಂದ ಗ್ರಂಥಾಲಯದ ಬಾಗಿಲುತೆರೆಯದೆ ಮತ್ತು ದಿನಪತ್ರಿಕೆಗಳನ್ನು ತರಿಸದೆ ಹಾಲಿ ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದು ವೇತನ ಗೌರವಧನ ಪಡೆಯುತ್ತಿದ್ದಾರೆಂದು ದೃಢೀಕರಿಸಿರುವುದು ಕಂಡು ಬರುತ್ತದೆ. **ನಿ.ಪಿ-7** ರ ಪ್ರಕಾರ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಮಧುಗಿರಿ ರವರು ಉಪನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರಿಗೆ ದಿನಾಂಕ 01.04.2014 ರಂದು ಪತ್ರ ಬರೆದು ಶ್ರೀ ಹನುಮಂತರಾಯಪ್ಪ ರವರ ಮೇಲೆ ದೂರು ಬಂದ ಪ್ರಯುಕ್ತ ತಾನು ದಿನಾಂಕ 22.02.2014 ಮತ್ತು 27.03.2014 ರಂದು ಎರಡು ದಿನಗಳಂದು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಲಾಗಿ ಗ್ರಂಥಾಲಯದ ಬಾಗಿಲಿಗೆ ಬೀಗ ಹಾಕಲಾಗಿತ್ತು, ಸ್ಥಳದಲ್ಲಿ ಗ್ರಾಮಸ್ಥರನ್ನು ವಿಚಾರಿಸಲಾಗಿ ಶ್ರೀ ಹನುಮಂತರಾಯಪ್ಪರವರು ಸುಮಾರು ಎರಡು ವರ್ಷಗಳಿಂದ ಗ್ರಂಥಾಲಯದ ಬಾಗಿಲನ್ನೆ ತೆರೆದಿರುವುದಿಲ್ಲವೆಂಬುದಾಗಿಯೂ ಮತ್ತು ಕೆಲಸ ನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ದಿನಪತ್ರಿಕೆಗಳನ್ನು ತರಿಸುತ್ತಿಲ್ಲವೆಂಬುದಾಗಿಯೂ, ಸದರಿಯವರು ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆಂದು ಹೇಳಿಕೆ ನೀಡಿರುವುದು ಕಂಡು ಬಂದಿರುತ್ತದೆ. ನಿ.ಪಿ-11 ನ್ನು ಪರಿಶೀಲಿಸಲಾಗಿ ದಿನಾಂಕ 18.07.2013 ರಂದು ಗ್ರಾಮ ಪಂಚಾಯ್ತಿ ಗ್ರಂಥಾಲಯಕ್ಕೆ ಭೇಟಿ ನೀಡಿದಾಗ ಗ್ರಂಥಾಲಯದ ಬಾಗಿಲು ಮುಚ್ಚಿರುತ್ತದೆಂದು ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರು ಸಹಿ ಮಾಡಿರುವುದು ಕಂಡು ಬರುತ್ತದೆ. ನಿ.ಪಿ-12 ರಿಂದ 14 **ಆ.ಸ.ನೌ-1 ಶ್ರೀರಂಗಪ್ಪ, ಪಂಚಾಯತಿ ಅಭಿವೃದ್ಧಿ ಅಧಿಕಾರಿ** ರವರು ಶ್ರೀ ಹನುಮಂತರಾಯಪ್ಪ ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರು ಗ್ರಂಥಾಲಯವು ತೆರೆಯದೆ ಇದ್ದರೂ ಸಹ 2013-14 ನೇ ಏಪ್ರಿಲ್ ನಿಂದ ಜೂನ್ ರವರೆಗೆ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾಗಿ ಇವರ ಸೇವೆಯು ತೃಪ್ತಿಕರವಾಗಿದೆಯೆಂದು ಪ್ರಮಾಣ ಪತ್ರ ನೀಡಿರುವುದು ಕಂಡು ಬರುತ್ತದೆ. ನಿ.ಪಿ-15 ರಿಂದ 19 **ಆ.ಸ.ನೌ-2 ಶ್ರೀ ಆರ್. ನಾಗರಾಜ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ**

ರವರು ಶ್ರೀ ಹನುಮಂತರಾಯಪ್ಪ ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರು ಗ್ರಂಥಾಲಯವು ತೆರೆಯದೆ ಇದ್ದರೂ ಸಹ 2013-14 ನೇ ಜುಲೈ ನಿಂದ ನವೆಂಬರ್ ರವರೆಗೆ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾಗಿ ಇವರ ಸೇವೆಯು ತೃಪ್ತಿಕರವಾಗಿದೆಯೆಂದು ಪ್ರಮಾಣ ಪತ್ರ ನೀಡಿರುವುದು ಕಂಡು ಬರುತ್ತದೆ. **ಆ.ಸ.ನೌ-3 ಶ್ರೀ ರವಿಚಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ** ರವರು ಶ್ರೀ ಹನುಮಂತರಾಯಪ್ಪ ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರು ಗ್ರಂಥಾಲಯವು ತೆರೆಯದೆ ಇದ್ದರೂ ಸಹ 2014-15 ನೇ ಮೇ ತಿಂಗಳಿನಲ್ಲಿ ನಿ.ಪಿ-21 ರಂತೆ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾಗಿ ಇವರ ಸೇವೆಯು ತೃಪ್ತಿಕರವಾಗಿದೆಯೆಂದು ಪ್ರಮಾಣ ಪತ್ರ ನೀಡಿರುವುದು ಆ ಸಮಯದಲ್ಲಿ ಶ್ರೀ ಹನುಮಂತರಾಯಪ್ಪ ರವರು ಗ್ರಾಮಪಂಚಾಯ್ತಿ ಸದಸ್ಯರಾಗಿರುವುದು ಕಂಡು ಬರುತ್ತದೆ. ನಿ.ಪಿ-22 ರಂತೆ ಪತ್ರಿಕೆಯ ಪ್ರತಿಯನ್ನು ಪರಿಶೀಲಿಸಲಾಗಿ ಗ್ರಂಥಾಲಯ ಇದ್ದರೂ ಇಲ್ಲದಂತಾಗಿದೆ ಎಂದು ಸಾರ್ವಜನಿಕರು ಪ್ರತಿಭಟಿಸಿರುವುದು ಕಂಡು ಬರುತ್ತದೆ. **ಆಪಾದಿತ ಸರ್ಕಾರಿ ನೌಕರ-4 ಶ್ರೀ ನಾರಾಯಣಮೂರ್ತಿ,** ಉಪ ನಿರ್ದೇಶಕರು (ಪ್ರಭಾರ), ಜಿಲ್ಲಾ ಸೆಂಟ್ರಲ್ ಲೈಬ್ರರಿ, ತುಮಕೂರು ಜಿಲ್ಲೆ ರವರು ಮರುವೇಕೆರೆ ಗ್ರಾಮಪಂಚಾಯತಿಯ ಗ್ರಂಥಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿ ಮತ್ತು ಶ್ರೀ ಹನುಮಂತರಾಯಪ್ಪ ರವರು ಸದಸ್ಯರಾಗಿ ಆಯ್ಕೆಯಾಗಿರುವುದು ಗೊತ್ತಿದ್ದರೂ ಸಹ ಸಾರ್ವಜನಿಕರಿಂದ ಅನೇಕ ಅಹವಾಲೂ ಬಂದಿದ್ದರೂ ಸಹ ಸದರಿಯವರ ಸೇವೆ ತೃಪ್ತಿಕರವಾಗಿದೆ ಎಂದು ಹೇಳಿ ಸದರಿಯವರ ವಿರುದ್ಧ ಯಾವುದೇ ಕ್ರಮಕೈಗೊಳ್ಳದೆ ನಿರ್ಲಕ್ಷ್ಯತೆ ತೋರಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.

ಮೇಲ್ಕಂಡ ಅಂಶಗಳಿಂದ ಶ್ರೀ ಹನುಮಂತರಾಯಪ್ಪರವರು ಸುಮಾರು 11 ವರ್ಷಗಳಿಂದ ಗ್ರಂಥಾಲಯ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, 2011-12 ನೇ ಸಾಲಿನಲ್ಲಿ ಮರುವೇಕೆರೆ ಗ್ರಾಮಪಂಚಾಯ್ತಿ ಸದಸ್ಯರಾಗಿ ಚುನಾಯಿತರಾಗಿ ನಿ.ಪಿ-4 ರಿಂದ ನಿ.ಪಿ-11 ರಂತೆ ಸುಮಾರು 2 ವರ್ಷಗಳಿಂದ ಮರುವೇಕೆರೆ ಗ್ರಾಮಪಂಚಾಯ್ತಿ ಬಂದ್ರೇಹಳ್ಳಿ ಗ್ರಾಮದ ಗ್ರಂಥಾಲಯವನ್ನು ತೆರೆಯದೆ ಸರ್ಕಾರದ ಗೌರವಧನ ಪಡೆದಿದ್ದು ಆ.ಸ.ನೌ-3 ರವರು ಸದರಿಯವರ ಸೇವೆ ತೃಪ್ತಿಕರವಾಗಿದೆಯೆಂದು ನಿ.ಪಿ-21 ರಂತೆ ಪ್ರಮಾಣಪತ್ರ ನೀಡಿರುವುದು ಹಾಗೂ ಈ ಬಗ್ಗೆ ನಿಮ್ಮ ಮೇಲಾಧಿಕಾರಿಗಳಿಗೆ ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡಿರುವುದು ವಿಚಾರಣೆಯಿಂದ ಸಾಭೀತಾಗಿರುತ್ತದೆ.

ಆಪಾದಿತ ಸರ್ಕಾರಿ ನೌಕರ-1 ಶ್ರೀ ಎಸ್.ಎಂ. ಶ್ರೀರಂಗಯ್ಯ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ನಿ.ಪಿ-12 ರಿಂದ 14 **ರಂತೆ** ಶ್ರೀ ಹನುಮಂತರಾಯಪ್ಪ ಗ್ರಾಮ ಪಂಚಾಯತಿ ಗ್ರಂಥಾಲಯ

ಮೇಲ್ವಿಚಾರಕರು ಗ್ರಂಥಾಲಯವು ತೆರೆಯದೆ ಇದ್ದರೂ ಸಹ 2013-14 ನೇ ಏಪ್ರಿಲ್ ನಿಂದ ಜೂನ್ ರವರೆಗೆ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾಗಿ ಇವರ ಸೇವೆಯು ತೃಪ್ತಿಕರವಾಗಿದೆಯೆಂದು ಪ್ರಮಾಣ ಪತ್ರ ನೀಡಿ ಕರ್ತವ್ಯಲೋಪವೆಸಗಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.

ಆಪಾದಿತ ಸರ್ಕಾರಿ ನೌಕರ-3 ಶ್ರೀ ರವಿಚಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಂಥಾಲಯವನ್ನು ತೆರೆಯದೆ ಇದ್ದರೂ ಸಹ ಸದರಿಯವರ ಸೇವೆ ತೃಪ್ತಿಕರವಾಗಿದೆಯೆಂದು ನಿ.ಪಿ-21 ರಂತೆ ಪ್ರಮಾಣಪತ್ರ ನೀಡಿರುವುದು ಹಾಗೂ ಸದರಿಯವರಿಗೆ ಅಲ್ಪ ಸಂಭಾವನೆ ನೀಡಿ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವುದು ಹಾಗೂ ಶ್ರೀ ಹನುಮಂತರಾಯಪ್ಪ ಗ್ರಾಮಪಂಚಾಯತಿ ಸದಸ್ಯರಾಗಿ ಆಯ್ಕೆಯಾಗಿರುವುದು ತಿಳಿದಿದ್ದರೂ ಸಹ ಸದರಿಯವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡದೆ ಕರ್ತವ್ಯಲೋಪ ಎಸಗಿರುವುದು ವಿಚಾರಣೆಯಿಂದ ಸಾಭೀತಾಗಿರುತ್ತದೆ.

ಆಪಾದಿತ ಸರ್ಕಾರಿ ನೌಕರ-4 ಶ್ರೀ ನಾರಾಯಣಮೂರ್ತಿ, ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ರವರು ಶ್ರೀ ಹನುಮಂತರಾಯಪ್ಪ ರವರು ಗ್ರಾಮಪಂಚಾಯತಿ ಸದಸ್ಯರಾಗಿ ಆಯ್ಕೆಯಾಗಿರುವ ಬಗ್ಗೆ ತಿಳಿದಿದ್ದರೂ ಮರುವೇಕೆರೆ ಗ್ರಾಮಪಂಚಾಯ್ತಿ ಗ್ರಂಥಾಲಯವನ್ನು ತೆರೆಯದಿರುವ ಬಗ್ಗೆ ಆನೇಕ ದೂರುಗಳು ಬಂದಿರುವುದು ಗೊತ್ತಿದ್ದರೂ ಸಹ ಅವರ ಸೇವೆ ತೃಪ್ತಿಕರವಾಗಿದೆ ಎಂದು ಹೇಳಿ ಅವರ ವಿರುದ್ಧ ಯಾವುದೇ ಕ್ರಮಕೈಗೊಳ್ಳದೆ ನಿರ್ಲಕ್ಷ್ಯ ತೋರಿರುವುದು ವಿಚಾರಣೆಯಿಂದ ಸಾಭೀತಾಗಿರುತ್ತದೆ.

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.**

## : ವಿಚಾರಣಾ ವರದಿ :

ಶಿಸ್ತು ಪ್ರಾಧಿಕಾರದವು ಆ.ಸ.ನೌ-1 ಶ್ರೀ **ಎಸ್.ಎಂ. ಶ್ರೀರಂಗಯ್ಯ,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ, ಆ.ಸ.ನೌ-2 ಶ್ರೀ **ನಾಗರಾಜು,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ, ಆ.ಸ.ನೌ-3 **ಶ್ರೀರವಿಚಂದ್ರ,** ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಮರುವೇಕೆರೆ ಗ್ರಾಮ ಪಂಚಾಯ್ತಿ,

ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು ಆ.ಸ.ನೌ–4 **ಶ್ರೀ ನಾರಾಯಣಮೂರ್ತಿ**, ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ವಿರುದ್ಧದ ದೋಷಾರೋಪಣೆಯಲ್ಲಿ ಮಾಡಲಾದ ಆಪಾದನೆಗಳನ್ನು ರುಜುವಾತು ಪಡಿಸುವಲ್ಲಿ **ಸಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**30ನೇ ನವೆಂಬರ್ 2021**

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Nagabhushanachar B.G. (Complainant) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. **Hanumanthrayappa,** Bandralli, Madugiri Taluk, Tumkur District (original) | |
| DW-2 : Sri. **R. Nagaraju (DGO-2)** (original) | |
| DW-3 : Sri. **Srirangaiah (DGO-1)** (original) | |
| DW-4 : Sri. **Srirangaiah (DGO-3)** (original) | |
| DW-5 : Sri. **Narayanamurthy L.B. (DGO-4)** (original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex. P.1 : | Complaint of complainant (Original) |
| Ex.P.2 : | Form No. I (complaint) (original) |
| Ex.P.3 : | Form No. II (Affidavit) dated 01/08/2014 (original) |
| Ex.P.4 : | Copy of resolution dated 20/07/2013 (Xerox) |
| Ex.P.5 : | Copy of letter of MLA, Madugiri Constituency. (Xerox) |
| Ex.P.6 : | Copy of letter of PDO, Maruvekere Gram Panchayath dated 22/06/2013 (Xerox) |
| Ex.P.7 : | Copy of letter of Executive Officer, Taluk Panchayath, Madugiri dated 01/04/2014 (Xerox) |

| | |
|---|---|
| Ex.P.8 : | Copy of requisition of public addressed to Deputy Director Public Central Library, Tumkur (Xerox) |
| Ex.P.9 : | Copy of Mahazar before Executive Officer, Taluk Panchayath, Madugiri by publics dated 27.03.2014. (Xerox) |
| Ex.P.10 : | Copy of another requisition of public addressed to Director, Public Library, Bengaluru dated 18/02/2014. (Xerox) |
| Ex.P.11 : | Copy of Report of Deputy Director, District Central Library, Tumkur dated 18/07/2013 (Xerox) |
| Ex.P.12 to 19 : | Copy of Service Certificates issued by PDOs (Xerox) |
| Ex.P.20 : | Certificate of PDO dated 27/06/2014 (Xerox) |
| Ex.P.21 : | Copy of letter written by Deputy Director, District Central Library, Tumkur dated 17/06/2014 (Xerox) |
| Ex.P.22 : | Copy of paper cuttings (Xerox) |
| **LIST OF EXHIBITS MARKED ON BEHALF OF DEFENSE:** | |
| Ex.D-1 : | Copy of letter dated 25.05.2011 of Under Secretary to Government, Education Department. ( Xerox ) |
| Ex.D-2 : | Copy of Government Proceedings dated 15.05.2013. ( Xerox ) |
| Ex.D-3 : | Copy of letter dated 21.12.2013 of Director to Deputy Director, District Library Tumkur ( Xerox ) |

| | |
|---|---|
| Ex.D-4 : | Attested copy of registration register extract (by Director to Deputy Director, District Library, Tumkur, from 9.9.2012 to 29.03.2014) (Attested Xerox copies) |
| Ex.D-5 : | Certified copy of attendance Book extract from 01.10.2012 to 01.06.2014 of Hanumanthrayappa) (Attested Xerox copies) |
| Ex.D-6 : | Copy of letter of Deputy Director, District Central Library, Tumkur dated 16/03/2017 addressed to Principal Secretary to Government, Education Department, Bengaluru. (Xerox copies) |
| Ex.D-7 : | Xerox copy of resolution dated 15/06/2013 of Zilla Panchayath, Tumkur. (Xerox copy) |
| Ex.D-8 : | Letter of Deputy Director, District Central Library, Tumkur dated 03/11/2014. (Xerox copy) |

Date of Retirement of DGO-1 is **30.06.2025**
Date of Retirement of DGO-2 is **31.12.2026**
Date of Retirement of DGO-3 is **30.06.2043**
Date of Retirement of DGO-4 is **30.09.2035**

30th November 2021.

30/11/21

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

# KARNATAKA LOKAYUKTA

No.UPLOK-2/DE/751/2016/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 14.12.2021.

## RECOMMENDATION

Sub:- Departmental inquiry against (1) Shri S.M.Srirangaiah, Panchayath Development Officer,(2) Sri R.Nagaraju, Panchayath Development Officer, (3) Sri Ravichandra, Panchayath Development Officer, Maruvekere Grama Panchayath, Madhugiri Taluk, Tumkur District, and (4) Sri Narayanamurthy, Deputy Director(in-charge), District Central Library, Tumkur- reg.

Ref:- 1) Government Order No. (1) RDP 750 GPS 2016 dated 22.11.2016 and (2) ED 232 LIB 2016 dated 20.12.2016.

2) Nomination order No. UPLOK-2/DE/751/2016 dated 23.12.2016 of Upalokayukta, State of Karnataka.

3) Inquiry report dated 30.11.2021 of Additional Registrar of Enquiries-10, Karnataka Lokayukta, Bengaluru.

~~~~~

The Government by its orders dated 22.11.2016 and 20.12.2016 initiated the disciplinary proceedings against (1) Shri S.M.Srirangaiah, Panchayath Development Officer,(2) Sri R.Nagaraju, Panchayath Development Officer, (3) Sri
~~~~~

Ravichandra, Panchayath Development Officer, Maruvekere Grama Panchayath, Madhugiri Taluk, Tumkur District, and (4) Sri Narayanamurthy, Deputy Director(in-charge), District Central Library, Tumkur, [hereinafter referred to as Delinquent Government Officials, for short as 'DGOs 1 to 4' respectively] and entrusted the departmental inquiry to this Institution.

2. This Institution by Nomination UPLOK-2/DE/751/2016 dated 23.12.2016 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them.

3. The DGOs were tried for the charge of illegally paying honorarium to one Hanumantharayappa stating that his work was satisfactory as Library Supervisor eventhough the Library was not opened for two years for the period for which he was holding the post of Member of Gram Panchayath and thereby caused financial loss to Govt. and committed misconduct.

4. The Inquiry Officer (Additional Registrar of Enquiries-10) on proper appreciation of oral and documentary evidence has held that, the above charge against the DGOs 1 to 4 is 'proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Enquiry Officer.

6. As per the First Oral Statements of the DGOs furnished by the Enquiry Officer,

i) DGO 1 S.M.Srirangaiah is due to retire from service on 31.05.2025.

ii) DGO 2 R.Nagaraju is due to retire from service on 31.12.2026.

iii) DGO 3 Ravichandra.R is due to retire from service on 30.06.2043.

iv) DGO 4 Narayanamurthy is due to retire from service on 31.05.2035.

7. Having regard to the nature of charge proved against the DGOs and considering the totality of circumstances, it is hereby recommended to the Competent Authority to impose penalty of "withholding two annual increments payable to DGOs 1 to 4 with cumulative effect".

8. Action taken in the matter shall be intimated to this Authority.

Connected records are enclosed herewith.

14/12/21

(JUSTICE B.S.PATIL)
Upalokayukta,
State of Karnataka.